ಇದನ್ನು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಇದು ಎಸೆನ್ಷಿಯಲ್ ಫೋರ್ಸಾಂ ಆಗಬೇಕಾದರೆ, ಇದು ಎಲ್ಲಾ ಕಡೆ ಜಾರಿಗೆ ಬರಬೇಕು. ಇದಕ್ಕೆ ಸಾಕಷ್ಟು ಹಣ ಬೇಕಾಗುತ್ತದೆ. ನಮ್ಮ ಪಕ್ಷದ ಹಾಗೂ ಸರಕಾರದ ಉದ್ದೇಶ ಏನೆಂದರೆ ಶಾಸನಬದ್ಧವಾಗಿ ಇದು ಆಗಬೇಕೆಂದು ಇದೆ. ಹಳ್ಳಿಗಾಡಿನ ದಂಡಿಯುವ ಜನಕ್ಕೆ ಉದ್ಯೋಗ ಕೊಡಬೇಕೆಂದು ಆಸೆ ಇರುತ್ತದೆ. ಪ್ರಾಯೋಗಿಕವಾಗಿ ನಾವು ಇದನ್ನು ಮಾಡುತ್ತಿದ್ದೇವೆ. ಪ್ರಾಯೋಗಿಕವಾಗಿ ನಾಲ್ಕಾರು ಜಿಲ್ಲೆಗಳಿಗೆ ವಿಸ್ತರಿಸಿ ಆಮೇಲೆ ಸಂಪನ್ಮೂಲಗಳು ಸಿಕ್ಕಿದಾಗ ಇನ್ನುಳಿದ ಜಿಲ್ಲೆಗಳಿಗೆ ವಿಸ್ತರಿಸಿ ಶಾಸನಬದ್ಧವಾಗಿ ಕೊಡಬೇಕೆನ್ನುವುದು ನಮ್ಮ ಉದ್ದೇಶ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆ ಬಗ್ಗೆ.

೬೨೮. ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಬೆಂಗಳೂರು ಅಭಿವೃದ್ಧಿ, ವಾರ್ತಾ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ ?

ಅ) ೧೯೮೩ನೇ ಪೂರ್ಚಿಯಿಂದ ಇಲ್ಲಿಯವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಂಚಿಕೆ ಮಾಡಿರುವ ನಿವೇಶನಗಳೆಷ್ಟು ? (ಸಾರ್ವಜನಿಕರು, ಹರಿಜನ, ಗಿರಿಜನರು, ಸರ್ಕಾರಿ ನೌಕರರು ಹಾಗೂ ಇನ್ನಿತರ ವರ್ಗಗಳ ಬಗ್ಗೆ ಪ್ರತ್ಯೇಕ ಅಂಕಿಅಂಶಗಳನ್ನು ಒದಗಿಸಬೇಕಾಗಿ ವಿನಂತಿ.

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇದುವರೆಗೆ ಶಾಸಕರ ಗೃಹ ನಿರ್ಮಾಣ ಸಂಘಕ್ಕೆ ನೀಡಿರುವ ನಿವೇಶನಗಳೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಒಟ್ಟು ೨೩.೯೩೦ ನಿವೇಶನಗಳನ್ನು ಹಂಚಿಕೆ ಮಾಡಿದ್ದು, (ಪ್ರವರ್ಗವಾರು ಅಂಕಿ ಅಂಶಗಳ ಪಟ್ಟಿಯನ್ನು ಲಗತ್ತಿಸಿದೆ).

ಆ) ಶಾಸಕರ ಗೃಹ ನಿರ್ಮಾಣ ಸಂಘಕ್ಕೆ ೧೯೮೧ರಲ್ಲಿ ಆರ್.ಟಿ. ನಗರ ಬಡಾವಣೆಯಲ್ಲಿ ೧೦೦ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ANNEXURE-I

Sl. No.	Date of notification	Date of allotment	No. of sites allotted		B.T.	S.T.	S.C.	Defence	State Govt.	Central Govt.	Physically handicapped	General Public	'I' Category
1	2	3	4		5	6	7	8	9	10	11	12	13
1.	21.07.82	25.1.84	1325		26	40	173	119	157	132	27	651	—
2.	19.10.82	30.4.84	839		15	25	111	65	99	83	17	425	—
3.	16.03.84	27.8.84	1500		30	45	195	–	–	–	–	1230	—
4.	15.09.84	28.1.85	3150		60	79	413	159	309	247	62	1661	160
5.	March 86		1915		30	45	202	78	154	124	30	804	78
				EWS	7	10	55	–	–	–	–	298	—
6.	Dec. 86 & Jan. 87		10159		153	229	999	383	768	613	153	3994	383
				EWE	50	75	372	–	–	–	50	1291	646
7.	July 87		3000		53	80	345	132	265	212	53	1378	132
				EWE	7	10	53	–	–	–	7	182	91
8.	April 1987 Ambedkar Jayanthi		1942		–	109	1371	–	–	–	–	–	462
		Total	23830		431	746	4289	936	1752	1411	399	11914	1952

ANNEXURE-II

Statement showing the sites allotted from 1983 to date to the various categories by way of Notifications by the Bangalore Development Authority.

No. of sites allotted	B.T.	S.T.	S.C.	Defence	State Govt.	Central Govt.	Physically handi-capped	General public	'I' Category
1	2	3	4	5	6	7	8	9	10
23830	431	746	4289	936	1752	1411	399	11914	1952

ಶ್ರೀ ಡಿ.ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ ೧೯೮೧ನೇ ಇಸವಿಯಿಂದ ಶಾಸಕರಿಗೆ ಒಂದು ಸೈಟನ್ನು ಸಹ ಕೊಡಲಿಲ್ಲ ಏಕೆ ? ಶಾಸಕರ ಗೃಹನಿರ್ಮಾಣ ಸಹಕಾರ ಸಂಘ ಇದೆ. ಆದರೂ ಸಹ ಒಂದು ಸೈಟನ್ನೂ ಹಂಚಿಕೆ ಮಾಡಿಲ್ಲ ಕಾರಣವೇನು ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ೧೯೮೧ನೇ ಇಸವಿಯಿಂದ ಶಾಸಕರಿಗೆ ಸುಮಾರು ಒಂದೂ ನೂರು ಸೈಟ್‌ಗಳನ್ನು ಹಂಚಲಾಗಿದೆ. ಈಗ ಸುಮಾರು ೫೦ಳ ಸೈಟ್‌ಗಳನ್ನು ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಇಲ್ಲಿ ಎರಡು ಸಹಕಾರ ಸಂಘಗಳು ಇವೆ. ಒಂದು ಶಾಸಕರ ಗೃಹನಿರ್ಮಾಣ ಸಂಘ ಆದಕ್ಕೆ ಶ್ರೀಮಾನ್ ನಾಣಯ್ಯನವರು ಅಧ್ಯಕ್ಷರೂ ಇನ್ನೊಂದಕ್ಕೆ ಶ್ರೀ ನಾರಾಯಣರಾವ್‌ರವರು ಅಧ್ಯಕ್ಷರು. ಈ ಎರಡೂ ಸಹಕಾರ ಸಂಘಗಳಿಗೆ ಸುಮಾರು ೫೦ಳ ನಿವೇಶನಗಳನ್ನು ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಇನ್ನು ಒಂದು ತಿಂಗಳಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಡಿ.ಎ. ಚಿನ್ನಪ್ಪ.—ಅಂತರರಾಷ್ಟ್ರೀಯ ವರ್ಷವೆಂದು ಕೇಂದ್ರ ಸರ್ಕಾರದವರು ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗೆ ಕೊಟ್ಟಿದ್ದಾರೆ. ಆದರಲ್ಲಿ ಬಿ. ಡಿ. ಎ.ಗೆ ಏನಾದರೂ ಹಣ ಕೊಟ್ಟಿದ್ದಾರೆಯೇ ? ಕೊಟ್ಟಿದ್ದರೆ ಎಷ್ಟು ಹಣ ಕೊಟ್ಟಿದ್ದಾರೆ ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದವರು ಹಣ ಬಿಡುಗಡೆ ಮಾಡಿದ್ದರೆ ಅದು ನಮಗೆ ಸಂಬಂದವಿಲ್ಲ. ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದಿಂದ ಯಾರು ಅರ್ಜಿಯನ್ನು ಹಾಕಿರುತ್ತಾರೋ ಅವರಿಗೆ ಗುಣ ಮಟ್ಟ ನೋಡಿ ನಿವೇಶನ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಕೇಂದ್ರ ಸರ್ಕಾರದಿಂದ ನಮಗೆ ಯಾವುದೇ ಹಣ ಬಂದಿಲ್ಲ.

ಶ್ರೀ ಡಿ.ಎ ಚಿನ್ನಪ್ಪ,—ಕೆಲವು ಜನರಿಗೆ ಸೈಟ್‌ಗಳನ್ನು ಕೊಟ್ಟಿದ್ದೀರಿ. ಹಣ ಕೂಡ ವಾಪಸ್ ಮಾಡಿದ್ದೀರಿ ? ಇದು ನಿಜವೇ?

ಶ್ರೀ ಎಂ.ಪಿ. ಪ್ರಕಾಶ್.—ನಿವೇಶನಗಳನ್ನು ಪಡೆದುಕೊಂಡವರಿಗೆ ಹಣ ವಾಪಸ್ ಮಾಡತಕ್ಕಂಥ ಪದ್ಧತಿ ಇಲ್ಲ. ಒಂದು ವೇಳೆ ಆಜಾತುರ್ಯದಿಂದ ಏನಾದರೂ ಆ ರೀತಿ ಆಗಿದ್ದರೆ ಕ್ರಮ ತೆಗೆದು ಕೊಳ್ಳುತ್ತೇವೆ. ಶಾಸಕರೇ ಆಗಲಿ, ಯಾರೇ ಆಗಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು),—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ರಾಜ್ಯದಲ್ಲಿ ನೀಡಿರುವ ಜನತಾ ಮನೆಗಳು

೧೧೫೫. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೧೯೮೪-೮೫, ೧೯೮೬-೮೭ ಹಾಗೂ ೧೯೮೭-೮೮ನೇ ಸಾಲಿಗೆ ಸರ್ಕಾರ ಎಷ್ಟು ಜನತಾ ಮನೆಗಳನ್ನು ಮಂಜೂರು ಮಾಡಿದೆ ಪ್ರತಿ ಸಾಲಿನಲ್ಲಿ ಪೂರ್ಣಗೊಂಡಿರುವ ಮನೆಗಳೆಷ್ಟು ಹಾಗೂ ಅಪೂರ್ಣಗೊಂಡಿರುವ ಮನೆಗಳೆಷ್ಟು ?

ಆ) ೧೯೮೪-೮೫ ರಿಂದಲೂ ಈ ಬಾಬ್ತಿನ ಮನೆಗಳಿಗಾಗಿ ಹಣ ನೀಡಬೇಕಾಗಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಇದುವರೆವಿಗೂ ಕೊಡದಿರಲು ಕಾರಣವೇನು ?